ತರಳಬಾಳು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಸಿರಿಗೆರೆ

# ತರಳಬಾಳು 'ಕೃಷಿ ಸಿಂಚನ'

ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ದಾವಣಗೆರೆ

ದೂರವಾಣಿ : 08192-263462
ಫ್ಯಾಕ್ಸ್: 08192 - 260969

ತ್ರೈಮಾಸಿಕ ಪತ್ರಿಕೆ
Quarterly News Letter
ಏಪ್ರಿಲ್ - ಜೂನ್ 2011

ಮಿಂಚಂಚೆ: dvgtkvk@yahoo.com
Website: www.taralabalukvk.com
ಸಂಪುಟ- 4 ಸಂಚಿಕೆ- 3

## ಸಿಂಚನಕ್ಕೆ ಮುನ್ನ.........

**ಸಹೃದಯ ಬಂಧುಗಳೇ,**

ಕ್ರಿಯಾ ಯೋಜನೆಯನ್ನು ಮಂಡಿಸಿ, ಮಂಜೂರು ಮಾಡಿಸಿಕೊಂಡು ಮಳೆಗಾಗಿ ಕಾಯುತ್ತಿರುವಾಗ, ಹೊಸ ಹಣಕಾಸು ವರ್ಷ ಆರಂಭವಾಗಿತ್ತು. ಹೊಸ ಉತ್ಸಾಹ ನಮ್ಮೆಲ್ಲರಲ್ಲಿ ಮನೆ ಮಾಡಿತ್ತು. ಏಪ್ರಿಲ್‌ನಿಂದ ಜೂನ್ ಮಾಸದವರೆಗೆ ಚಟುವಟಿಕೆಗಳ ಹಂದರವನ್ನೆ ನೇಯ್ದು, ಕಾರ್ಯೋನ್ಮುಖರಾದೆವು.

ವೈಜ್ಞಾನಿಕ ಸಲಹಾ ಸಮಿತಿ ಸಭೆ, ಹಲವಾರು ಪ್ರಾಯೋಜಿತ ತರಬೇತಿ ಕಾರ್ಯಕ್ರಮಗಳು, ವರದಿಗಳು, ತಂತ್ರಜ್ಞಾನ ಪ್ರಾತ್ಯಕ್ಷಿಕೆಗಳಿಗೆ ರೈತರ ಆಯ್ಕೆ, ರೇಡಿಯೋ ಟಿವಿಗಳಲ್ಲಿ ತಂತ್ರಜ್ಞಾನ ಪ್ರಸರಣ ಕಾರ್ಯಕ್ರಮಗಳು, ಸಹಭಾಗಿತ್ವದ ತರಬೇತಿಗಳು, ಹೀಗೆ ಹಲವಾರು ವಿಶೇಷ ಚಟುವಟಿಕೆಗಳಿಗೆ ಸಮಯ ಮೀಸಲಾಯ್ತು. ಇವೆಲ್ಲವುಗಳಿಗೆ ಕಲಶಪ್ರಾಯವಾಗಿ ಜರುಗಿದ ಕಾರ್ಯಕ್ರಮಗಳೆಂದರೆ "ನಿಕ್ರಾ" ಯೋಜನೆಯ ಉದ್ಘಾಟನೆ ಮತ್ತು QRT Travel Workshop. ನಿಕ್ರಾ (NICRA) ಯೋಜನೆಯ ಉದ್ಘಾಟನೆಯನ್ನು ಶ್ರೀ ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು ಸಿದ್ದನೂರಿನಲ್ಲಿ ನೆರವೇರಿಸಿದರು. ರೈತರ ಉಪಯೋಗಕ್ಕಾಗಿ ಕೃಷಿ ಉಪಕರಣಗಳ ಬಾಡಿಗೆ ನೀಡುವ ಕೇಂದ್ರ, ಹವಾಮಾನ ಮಾಪನ ಕೇಂದ್ರ, ಯೋಜನಾ ಕಚೇರಿ ಇವುಗಳೆಲ್ಲವನ್ನು ಪೂಜ್ಯರು ಲೋಕಾರ್ಪಣೆ ಮಾಡಿದರು. ದಾವಣಗೆರೆ ಲೋಕಸಭಾ ಕ್ಷೇತ್ರದ ಸಂಸದರಾದ ಸನ್ಮಾನ್ಯ ಶ್ರೀ ಎಂ. ಸಿದ್ದೇಶ್ವರರವರು ಯೋಜನೆಗೆ ಶುಭಹಾರೈಸಿದ್ದು, ಶ್ರೀ ರಾಮಮೂರ್ತಿಯವರು, ವಿಜ್ಞಾನಿಗಳು, ವಲಯ ನಿರ್ದೇಶನಾಲಯ, ICAR, Bangalore ಇವರು ಕಿವಿ ಮಾತು ಹೇಳಿದ್ದು, ಸರ್ಕಾರದ ಇಲಾಖೆಗಳ ಹಿರಿಯ ಅಧಿಕಾರಿಗಳು ಮತ್ತು ಇಡೀ ಸಿದ್ದನೂರಿನ ಸಮಸ್ತ ರೈತ ಬಾಂಧವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು, ಕಾರ್ಯಕ್ರಮದ ವಿಶೇಷಗಳ ಸರಣಿಯಲ್ಲಿದ್ದಂಥವು.

ಧಾರವಾಡದ ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದ Quinquennial Review (ಐದು ವರ್ಷಗಳ ಪ್ರಗತಿ ಪರಿಶೀಲನೆ) ಕಾರ್ಯಾಗಾರ ನಮ್ಮನ್ನು ಇನ್ನಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಹಕಾರಿಯಾಯ್ತು. ಎಲ್ಲಿ ಹೆಚ್ಚು, ಎಲ್ಲಿ ಕಡಿಮೆ ಎಂಬುದರ ಅರಿವು ಮೂಡಿತ್ತು. ಬರುವ 12 ನೇ ಪಂಚವಾರ್ಷಿಕ ಯೋಜನೆಯವಧಿಯಲ್ಲಿ ನಾವು (ದೇಶದಲ್ಲೆಡೆಯ ಕೆವಿಕೆ ಗಳೆಲ್ಲವೂ ) ಯಾವ ಬಗೆಯ ಸಾಧನೆ ಮಾಡಬೇಕು ಎನ್ನುವ ಕಲ್ಪನೆಯ ಕುರಿತು ನಡೆದ ಸುದೀರ್ಘ ಚರ್ಚೆ ನಮ್ಮನ್ನು ಚಿಂತನೆಗೆ ದೂಡಿತ್ತು.

ಹೊಸ ಬಗೆಯ ತಂತ್ರಜ್ಞಾನಗಳನ್ನು ರೈತರಿಗೆ ಪರಿಚಯ ಮಾಡುವ ಉಮೇದು, ನಿಕ್ರಾ ಯೋಜನೆಯ ಸಿದ್ದನೂರಿನಲ್ಲಿ ಮೈತುಂಬಾ ಕೆಲಸಗಳು, ಅತ್ತಿತ್ತ ನೋಡುವಷ್ಟರಲ್ಲಿ ಬಂದನೋಡಿ ವರುಣ ದೇವ ತಗೋ ಶುರುವಾಯ್ತು Queue ಗಳ ಸರಮಾಲೆ, ಗೊಬ್ಬರ, ಬೀಜ, ಔಷಧಿ, ಉಪಕರಣಗಳು ಹೀಗೆ ಎಲ್ಲವುಕ್ಕೂ ಒಮ್ಮೆಗೆ ಬೇಡಿಕೆ. ಈ ಸಂದರ್ಭದಲ್ಲಿ ಹೆಚ್. ಎಸ್. ವೆಂಕಟೇಶಮೂರ್ತಿಯವರ ಈ ಕೆಳಗಿನ ಕವನವನ್ನು ನಿಮ್ಮೊಂದಿಗೆ ಹಂಚಿಕೊಳ್ಳಬೇಕೆನಿಸಿತು.

### ಓ ಬೆಳಕೇ

ಓ ಬೆಳಕೇ
ಬಾಳಿನಾ ಹೊಂಬೆಳಕೇ
ಭೂಮಿಗೆ ಅವತರಿಸು
ಸದಾ ಜೇನ ಮಳೆ ಸುರಿಸು॥
ನೆಲದೊಳಗೆ
ತಾಯಿಯ ಮುಖದೊಳಗೆ
ನೇಗಿಲು ಕೊರೆದ ತುಟಿಯ ಸಾವರ॥
ಮಾತು ಬರದ ಪ್ರಾರ್ಥನೆ
ತೆರೆದ ತುಟಿಯಾ ಯಾಚನೆ
ಕಾವು ಕೊಡುವ ಸೂರ್ಯ ಪಕ್ಷಿಗೆ
ಓ ಬೆಳಕೇ ........॥

ಹೊಲದೊಳಗೆ
ಕಾದಿರೋ ಬೀಜಗಳಾ
ಮುಚ್ಚಿದ ಕಣ್ಣಾ
ಅಣ್ಣಾ ತೆರೆಯಿಸೋ॥

ಸಾಲು ಬೆಳೆಯ ಕೈಗೆ
ಹಸಿರು ದ್ವಜದ ಕೊಡಗೆ
ತೋಳು ಬೀಸಲಿ ಗಾಳಿಗೆ
ಓ ಬೆಳಕೇ............॥

ಮಣ್ಣೊಳೊಗೆ
ಅನ್ನವು ಅವತರಿಸಿ
ಹಸಿದಿರೋ ಹೊಟ್ಟೆ
ತುಂಬಿ ತಣೆಯಲಿ॥
ಸಾಲು ಗಿಳಿಯೂ ಕೂತು
ಆಡಿ ಪ್ರೀತಿ ಮಾತು
ಹಸಿರು ಚಿಮ್ಮಲಿ ಬಾನಿಗೆ
ಓ ಬೆಳಕೇ........॥
ಬಾಳಿನಾ ಹೊಂಬೆಳಕೇ
ಭೂಮಿಗೆ ಅವತರಿಸು
ಸದಾ ಜೇನಮಳೆ ಸುರಿಸು॥
ಓ ಬೆಳಕೇ..........॥



**ದಾವಣಗೆರೆ ಜಿಲ್ಲೆಗೆ ಬಹುತೇಕ ಒಳ್ಳೆಯ ಮಳೆ 204.5 ಮಿ. ಮೀ. ಬಿದ್ದಿದೆ. 128626 ಹೇ. ವಿಸ್ತೀರ್ಣದಷ್ಟು ಬಿತ್ತನೆ ಆಗಿದೆ (ಏಪ್ರಿಲ್-ಜೂನ್). ಸುತ್ತೆಲ್ಲ ಹಸಿರು, ಕಡಿಮೆಯಾಗಲಿ ನಿಟ್ಟುಸಿರು, ಹರಿಸೋಣ ಬೆವರು ಉಣ್ಣುವ ಮುಂಚೆ ಮುದ್ದೆ ಸಾರು. ಒಳ್ಳೆಯ ಬೆಳೆಯ ನಿರೀಕ್ಷೆಯಲ್ಲಿ ರೈತರೊಂದಿಗೆ ನಾವು ಇದ್ದೇವೆ. ನಿಮ್ಮ ಹಾರೈಕೆಯ ಮಳೆಯು ಕೂಡ ಸಮೃದ್ಧವಾಗಿ ನಮ್ಮ ಮೇಲೆ ಬೀಳಲಿ ಎಂದು ಬಯಸುತ್ತಾ, ನಮಸ್ಕರಿಸುವೆ.**

-ವಿಶ್ವಾಸದೊಂದಿಗೆ,
ಡಾ. ದೇವರಾಜ ಟಿ.ಎನ್.





ದಾವಣಗೆರೆ ತಾಲ್ಲೂಕು ಸಿದ್ದನೂರು ಗ್ರಾಮದಲ್ಲಿ ನಿಕ್ರಾ ಯೋಜನೆಯಡಿ
ಗುಂಪು ಚರ್ಚೆ ಮತ್ತು ಗ್ರಾಮೀಣ ಸಹಭಾಗಿತ್ವ ಅಧ್ಯಯನ





ದಿನಾಂಕ 29-04-2011 ರಂದು 9ನೇ ವೈಜ್ಞಾನಿಕ ಸಲಹಾ ಸಮಿತಿ ಸಭೆ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ವಲಯ ಯೋಜನಾ ನಿರ್ದೇಶಕರಾದ ಡಾ. ಎಸ್. ಪ್ರಭುಕುಮಾರರವರು ಕೇಂದ್ರದಲ್ಲಿರುವ ಮಣ್ಣು ಪರೀಕ್ಷಾ ಪ್ರಯೋಗಾಲಯವನ್ನು ವೀಕ್ಷಿಸಿದರು.



ದಿನಾಂಕ 20-05-2011 ರಂದು ಸಿದ್ದನೂರು ಗ್ರಾಮದಲ್ಲಿ
ನಿಕ್ರಾ ಯೋಜನೆಯನ್ನು ಶ್ರೀ ಮದುಜ್ಜಯಿನಿ ಸದ್ಧರ್ಮ ಸಿಂಹಾಸನಾಧೀಶ ಶ್ರೀ ತರಳಬಾಳು ಜಗದ್ಗುರು
ಶ್ರೀ 1108 ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಗಳು ಉದ್ಘಾಟಿಸಿದರು



ದಿನಾಂಕ 24-06-2011 ರಂದು ಕೃಷಿ ವಿಶ್ವವಿದ್ಯಾನಿಲಯ, ಧಾರವಾಡದಲ್ಲಿ ಆಯೋಜಿಸಿದ್ದ QRT Travel Workshop ಸಂದರ್ಭದಲ್ಲಿ ವಸ್ತು ಪ್ರದರ್ಶನವನ್ನು QRT ಮುಖ್ಯಸ್ಥರಾದ ಡಾ. ಮೃತ್ಯುಂಜಯ, ಮತ್ತು ಡಾ. ಎಸ್. ಪ್ರಭುಕುಮಾರ, ವಲಯ ಯೋಜನಾ ನಿರ್ದೇಶಕರು, ಬೆಂಗಳೂರು ಇವರು ವೀಕ್ಷಿಸುತ್ತಿರುವುದು. ಕಾರ್ಯಗಾರದಲ್ಲಿ ಕಾರ್ಯಕ್ರಮ ಸಂಯೋಜಕರಾದ ಡಾ. ದೇವರಾಜ ಟಿ.ಎನ್. ರವರು 2005-10 ರ ಪ್ರಗತಿ ವರದಿಯನ್ನು ಮಂಡಿಸಿದರು.ಶ್ರೀ ರಘುರಾಜ ಜೆ. ಮತ್ತು ಶ್ರೀ ಪ್ರಸನ್ನಕುಮಾರ ಎನ್. ರವರು ತಂತ್ರಜ್ಞಾನ ವಸ್ತು ಪ್ರದರ್ಶನ ಮಳಿಗೆಯನ್ನು ವ್ಯವಸ್ಥೆಗೊಳಿಸಿದ್ದರು.



ದಿನಾಂಕ 26-04-2011 ರಂದು 'ಬಾಳೆಯಲ್ಲಿ ಅಧಿಕ ಇಳುವರಿಗೆ ಬನಾನ ಸ್ಪೆಷಲ್ ಬಳಕೆ' ಮುಂಚೂಣಿ ಪ್ರಾತ್ಯಕ್ಷಿಕೆಯ ಕ್ಷೇತ್ರೋತ್ಸವನ್ನು ದಾವಣಗೆರೆ ತಾಲ್ಲೂಕು ಕುಕ್ಕವಾಡ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.

## ಹಮ್ಮಿಕೊಂಡಿರುವ ಕ್ಷೇತ್ರಪ್ರಯೋಗಗಳು

| ಬೆಳೆ | ಶೀರ್ಷಿಕೆ | ರೈತರ ಸಂಖ್ಯೆ |
|---|---|---|
| ಮೆಕ್ಕೆಜೋಳ | ಹೈಬ್ರಿಡ್ ಮೆಕ್ಕೆಜೋಳದಲ್ಲಿ ಕಳೆ ನಿರ್ವಹಣೆ | 12 |
| ತೆಂಗು | ತೆಂಗಿನಲ್ಲಿ ಸಮಗ್ರ ಆಹಾರ ಪೂರೈಕೆಗೆ ಕೋಕೊನೆಟ್ ಟಾನಿಕ್‌ನ ಬಳಕೆ | 05 |
| ವೀಳ್ಯದೆಲೆ | ವೀಳ್ಯದೆಲೆಯಲ್ಲಿ ಆಧಾರ ಗಿಡಗಳಾಗಿ ಗಂಟುರೋಗ ನಿರೋಧಕ ಹಾಲಿವಾಣದ ಪರಿಚಯ | 05 |

## ಹಮ್ಮಿಕೊಂಡಿರುವ ಮುಂಚೂಣಿ ಪ್ರಾತ್ಯಕ್ಷಿಕೆಗಳು

| ಬೆಳೆ | ಶೀರ್ಷಿಕೆ | ರೈತರ ಸಂಖ್ಯೆ |
|---|---|---|
| ಮೆಕ್ಕೆಜೋಳ | ಹೈಬ್ರಿಡ್ ಮೆಕ್ಕೆಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ (NAH-1136 and NAH-2049) ಹಾಗೂ ಅಂತರ ಬೆಳೆಯಾಗಿ ತೊಗರಿ (BRG-2) | 50 |
| ರಾಗಿ | ಅಧಿಕ ಇಳುವರಿ ಕೊಡುವ ರಾಗಿ KMR-201, MR-6 and GPU-28 ತಳಿಗಳ ಸಮಗ್ರ ಬೆಳೆ ನಿರ್ವಹಣೆ | 26 |
| ಅಡಿಕೆ | ಅಡಿಕೆ ತೋಟಗಳಲ್ಲಿ ಬಸವನಹುಳುವಿನ ಸಮಗ್ರ ನಿರ್ವಹಣೆ | 12 |
| ಬೀನ್ಸ್/ ತಿಂಗಳ ಹುರಳಿ | ತಿಂಗಳ ಹುರಳಿಯಲ್ಲಿ ಅಧಿಕ ಇಳುವರಿ ಕೊಡುವ 'ಅರ್ಕಾ ಸುವಿಧ' ತಳಿಯ ಪರಿಚಯ | 15 |



ದಿನಾಂಕ 16-05-2011 ರಂದು ಕೇಂದ್ರದಲ್ಲಿ ರೈತ -ರೈತ ಸಂವಾದ ಸಭೆ ಏರ್ಪಡಿಸಲಾಗಿತ್ತು. ಈ ಸಂದರ್ಭದಲ್ಲಿ ನಾಟಿ ಬೀಜ ವಿನಿಮಯ ಜಾತ್ರೆಯಲ್ಲಿ ರೈತರು ಸಾವಯವ ಬೀಜ ವಿನಿಮಯ ಮಾಡಿಕೊಂಡರು.

**ರೈತ ಕ್ಷೇತ್ರ ಪಾಠಶಾಲೆ** ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ರೈತ ಕ್ಷೇತ್ರ ಪಾಠಶಾಲೆಯನ್ನು "ಮೆಕ್ಕೆಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ" ವಿಷಯವಾಗಿ ದಾವಣಗೆರೆ ತಾಲ್ಲೂಕು ಸಿದ್ದನೂರು ಗ್ರಾಮದಲ್ಲಿ 23 ರೈತರಿಗೆ ಹಮ್ಮಿಕೊಳ್ಳಲಾಗಿದೆ.

**ಆಚರಿಸಿದ ವಿಶೇಷ ದಿನಗಳು:**

22-04-2011: International Mother Earth Day

06-06-2011: World Environment Day

### ಆಕಾಶವಾಣಿ ಭದ್ರಾವತಿ / ಚಿತ್ರದುರ್ಗದಿಂದ ಬಿತ್ತರಗೊಂಡ ಕಾರ್ಯಕ್ರಮಗಳು:

| ಶಿರ್ಷಿಕೆ | ಆಕಾಶವಾಣಿ | ದಿನಾಂಕ | ತಜ್ಞರು |
|---|---|---|---|
| ಮೆಕ್ಕೆಜೋಳದಲ್ಲಿ ಆಧುನಿಕ ಬೇಸಾಯ ಕ್ರಮಗಳು | ಚಿತ್ರದುರ್ಗ | 15-06-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |
| ಭತ್ತದಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ | ಭದ್ರಾವತಿ | 16-06-2011 | ಶ್ರೀ ಪ್ರದೀಪ್ ಹೆಚ್.ಎಂ. |
| ಅಡಿಕೆ ಬೆಳೆಯಲ್ಲಿ ಸಮಗ್ರ ಪೋಷಕಾಂಶಗಳ ನಿರ್ವಹಣೆ | ಭದ್ರಾವತಿ | 16-06-2011 | ಶ್ರೀ ಬಸವನಗೌಡ ಎಂ.ಜಿ. |
| ಮೆಕ್ಕೆಜೋಳದಲ್ಲಿ ಸಮಗ್ರ ಪೀಡೆ ನಿರ್ವಹಣೆ | ಭದ್ರಾವತಿ | 16-06-2011 | ಶ್ರೀ ಪ್ರಸನ್ನಕುಮಾರ ಎನ್ |
| ಸಣ್ಣ ರೈತರಿಗೆ ಸಮಗ್ರ ಮೀನು ಕೃಷಿ | ಭದ್ರಾವತಿ | 16-06-2011 | ಡಾ. ದೇವರಾಜ ಟಿ.ಎನ್. |
| ಹತ್ತಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ | ಭದ್ರಾವತಿ | 16-06-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |

### ಈ ಟಿವಿ ಅನ್ನದಾತ ವಾಹಿನಿಯಲ್ಲಿ ಬಿತ್ತಗೊಂಡ ಕಾರ್ಯಕ್ರಮಗಳು:

| ಶಿರ್ಷಿಕೆ | ದಿನಾಂಕ | ತಜ್ಞರು |
|---|---|---|
| ಬಿ.ಟಿ. ಹತ್ತಿಯಲ್ಲಿ ಆಧುನಿಕ ಬೇಸಾಯ ಕ್ರಮಗಳು | 27-05-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |
| ಮೆಕ್ಕೆಜೋಳದಲ್ಲಿ ಸಮಗ್ರ ಬೆಳೆ ನಿರ್ವಹಣೆ | 05-06-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |
| ಬಿಟಿ. ಹತ್ತಿಯಲ್ಲಿ ಪ್ಲಾನೋಫಿಕ್ಸ್ ಮತ್ತು ಲಘು ಪೋಷಕಾಂಶ ನಿರ್ವಹಣೆ | 07-06-2011 | ಶ್ರೀ ಮಲ್ಲಿಕಾರ್ಜುನ ಬಿ.ಓ. |
| ಒಳನಾಡು ಕೃಷಿ ಹೊಂಡಗಳಲ್ಲಿ ಮೀನು ಕೃಷಿ ಮಾಡಿಕೊಂಡು ಲಾಭ ಪಡೆಯುವುದು ಹೇಗೆ? | 20-06-2011 | ಡಾ. ದೇವರಾಜ ಟಿ.ಎನ್. |
| ಅಡಿಕೆ ಬೆಳೆಯಲ್ಲಿ ನೀರಿನ ನಿರ್ವಹಣೆ | 20-06-2011 | ಶ್ರೀ ಬಸವನಗೌಡ ಎಂ.ಜಿ. |
| ಅಡಿಕೆ ಕೊಯ್ಲಿಗೆ ನೂತನ ಸಾಧನ- ರೈತನ ಅವಿಷ್ಕಾರ | 20-06-2011 | ಶ್ರೀ ಬಸವನಗೌಡ ಎಂ.ಜಿ. |

### ಕೇಂದ್ರದ ತಜ್ಞರುಗಳು ಭಾಗವಹಿಸಿರುವ ಕಾರ್ಯಗಾರಗಳು / ವಿಚಾರ ಸಂಕಿರಣಗಳು:

| ದಿನಾಂಕ | ವಿಷಯ | ಸ್ಥಳ | ಭಾಗವಹಿಸಿದ ತಜ್ಞರು |
|---|---|---|---|
| 01-06-2011 | "ಆಹಾರ ಉತ್ಪಾದನೆಗೆ ಕ್ರಮಬದ್ಧ ಕೀಟನಾಶಕ ಬಳಕೆ" | ರಾಷ್ಟ್ರೀಯ ಕಾರ್ಯಗಾರ, ನವದೆಹಲಿ | ಶ್ರೀ ಪ್ರಸನ್ನಕುಮಾರ ಎನ್. |
| 03-06-2011 | "Orientation programme on use of Automatic weather station and its maintanance" | CRIDA ಸಂಸ್ಥೆ, ಹೈದರಾಬಾದ್ | ಶ್ರೀ ಮಲ್ಲಿಕಾರ್ಜುನ ಬಿ.ಓ. |
| 24-06-2011 | "Travel workshop on Quinquennial Review Team" | ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ | ಡಾ. ದೇವರಾಜ ಟಿ.ಎನ್.<br>ಶ್ರೀ ರಘುರಾಜ ಜೆ.<br>ಶ್ರೀ ಪ್ರಸನ್ನಕುಮಾರ ಎನ್. |

### ಮುಂಬರುವ ಪ್ರಮುಖ ಕಾರ್ಯಕ್ರಮಗಳು:

| ಕಾರ್ಯಕ್ರಮಗಳು | ದಿನಾಂಕ |
|---|---|
| ಪೌಷ್ಠಿಕ ಕೈತೋಟ ತರಬೇತಿ | 6-07-2011 |
| ಹತ್ತಿಯಲ್ಲಿ ಸಮಗ್ರ ಕೀಟ ಮತ್ತು ರೋಗ ನಿರ್ವಹಣೆ ತರಬೇತಿ | 08-07-2011 |
| ಪೌಷ್ಠಿಕ ಕೈತೋಟ ತರಬೇತಿ | 14-07-2011 |
| ರಾಗಿಯಲ್ಲಿ ಬೀಜೋಪಚಾರ (ಜೈವಿಕ ಗೊಬ್ಬರ) ತರಬೇತಿ | 18-7-2011 |
| ಪಶುಗಳಿಗೆ ಸಮತೋಲನ ಆಹಾರ ಪೂರೈಕೆ ಮತ್ತು ಎರೆಗೊಬ್ಬರ ತಯಾರಿಕೆ ತರಬೇತಿ | 20-07-2011 ರಿಂದ 23-07-2011 |
| ಹತ್ತಿಯಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ತರಬೇತಿ | 25-07-2011 |
| ಪೌಷ್ಠಿಕ ಕೈತೋಟ ತರಬೇತಿ | 28-07-2011 |
| ಅಡಿಕೆಯಲ್ಲಿ ಬಸವನ ಹುಳುವಿನ ಸಮಗ್ರ ನಿರ್ವಹಣೆ ತರಬೇತಿ | ಜುಲೈ 2011 |
| ಪಾರ್ಥೇನಿಯಂ ನಿರ್ಮೂಲನಾ ಸಪ್ತಾಹ | 08-08-2011 ರಿಂದ 13-08-2011 |
| ಟೊಮ್ಯಾಟೋದಲ್ಲಿ ಸಮಗ್ರ ಬೆಳೆ ನಿರ್ವಹಣೆ ತರಬೇತಿ | 18-08-2011 |
| ಕೃಷಿ ತಂತ್ರಜ್ಞಾನ ಸಪ್ತಹಾ | 22-08-2011 ರಿಂದ 26-08-2011 |
| ವೀಳ್ಯದೆಲೆಯಲ್ಲಿ ಸಮಗ್ರ ಬೆಳೆ ನಿರ್ವಹಣೆ ಕಾರ್ಯಗಾರ | 30-08-2011 |
| ಕ್ಷೇತ್ರೋತ್ಸವ: ತಿಂಗಳ ಹುರುಳಿಯಲ್ಲಿ ಅಧಿಕ ಇಳುವರಿ ಕೊಡುವ 'ಅರ್ಕಾಸುವಿಧ' ತಳಿಯ ಪರಿಚಯ | ಆಗಸ್ಟ್ 2011 |
| ಸಾವಯವ ಭತ್ತ ಮತ್ತು ಮೀನು ಮಿಶ್ರಕೃಷಿ ತರಬೇತಿ | ಆಗಸ್ಟ್ 2011 |
| ಅಡಿಕೆಯಲ್ಲಿ ಹಿಡಿಮುಂಡಿಗೆ ರೋಗದ ಸಮಗ್ರ ನಿರ್ವಹಣೆ ತರಬೇತಿ | ಆಗಸ್ಟ್ 2011 |
| ಭತ್ತದಲ್ಲಿ ಸಮಗ್ರ ಪೋಷಕಾಂಶ ನಿರ್ವಹಣೆ ತರಬೇತಿ | 01-09-2011 |
| ವೆಲ್‌ವೆಟ್ ಬೀನ್ಸ್‌ನಲ್ಲಿ ಬೇಸಾಯಕ್ರಮಗಳು ಮತ್ತುಕೃಷಿಯಲ್ಲಿ ಅದರ ಉಪಯುಕ್ತತೆ ತರಬೇತಿ | 03-09-2011 |
| ತೊಗರಿಯಲ್ಲಿ ಸಮಗ್ರ ಬೆಳೆ ನಿರ್ವಹಣೆ ತರಬೇತಿ | 05-09-2011 |
| ನಿಕ್ರಾ ಯೋಜನೆಯಡಿ ಅಧ್ಯಯನ ಪ್ರವಾಸ | 05-09-2011 ರಿಂದ 7-09-2011 |
| ಬಲಿತ ಗೆಂಡೆ ಮೀನುಗಳ ಉತ್ಪಾದನಾ ತಾಂತ್ರಿಕತೆಗಳ ತರಬೇತಿ | ಸೆಪ್ಟೆಂಬರ್ 2011 |

## ಕೃಷಿ ಮುನ್ಸೂಚನೆಗಳು (ಜುಲೈ-ಸಪ್ಟೆಂಬರ್-2011):

**ಮೆಕ್ಕೆಜೋಳ** • ಕಾಳು ಕಟ್ಟುವ ಹಂತ / ಹಾಲುಕಾಳು ಹಂತದಲ್ಲಿ ಮೇಲ್ಭಾಗದ 3-4 ಹಸಿರು ಎಲೆಗಳ ಸಮೇತ ತುರಾಯಿ ಕತ್ತರಿಸಿದಾಗ ತೆನೆಯೊಳಗೆ ಕಾಳು ಕಟ್ಟುವುದರ ಮೇಲೆ ವ್ಯತಿರಿಕ್ತ ಪರಿಣಾಮವಾಗಿ ಕಾಳಿನ ತೂಕ ಕಡಿಮೆಯಾಗುವುದು. ಇದರಿಂದ ಶೇ. 10-20 ರಷ್ಟು ಇಳುವರಿ ಕುಂಠಿತವಾಗುವುದು. ಬಿತ್ತಿದ 100 ದಿನಗಳ ನಂತರ ತೆನೆಯಲ್ಲಿ ಪೂರ್ತಿ ಕಾಳು ಕಟ್ಟಿದ ನಂತರವೇ ತೆನೆಯಲ್ಲಿನ ರೇಷ್ಮೆ ಒಣಗಿ ಕಂದು ಬಣ್ಣಕ್ಕೆ ತಿರುಗಿದಾಗ ಸಸಿಯ ಮೇಲ್ಭಾಗವನ್ನು ತುರಾಯಿ ಸಮೇತ ಮೇವಿಗಾಗಿ ಕತ್ತರಿಸುವುದು ಸೂಕ್ತ.

**ಕಾಂಡಕೊರಕ:** ಬೆಳೆಯ ಬೆಳವಣಿಗೆಯ ಒಂದು ತಿಂಗಳು ನಂತರ ಸುಳಿಯನ್ನು ತಿನ್ನುತ್ತವೆ. ಬೆಳೆ ಕಟಾವು ಆಗುವವರಗೆ ಬಾಧೆ ಇರುತ್ತದೆ. ಸುಳಿ ಒಣಗಿ ಎಲೆಗಳ ಮೇಲೆ ರಂಧ್ರಗಳು ಕಾಣುತ್ತವೆ. ರಂಧ್ರ ಸೀಳಿ ನೋಡಿದಾಗ ಬಿಳಿ ಮಿಶ್ರಿತ ಕಂದು ಬಣ್ಣದ ಕಾಂಡಕೊರಕ ಕಾಣುತ್ತದೆ.

**ಹತೋಟಿ:** ಹುಳುವಿನ ಬಾಧೆಗೆ ತುತ್ತಾದ ಗಿಡಗಳನ್ನು ಕಿತ್ತು ಸುಡಬೇಕು. ಬಿತ್ತುವಾಗ ಸಾಲಿನಲ್ಲಿ ಮತ್ತು ಬಿತ್ತಿದ ಒಂದು ತಿಂಗಳ ನಂತರ ಕೀಟ ಬಾಧೆ ಕಂಡಾಗ ಕಾರ್ಬೋಫ್ಯುರಾನ್ 3 ಜಿ, 8 ಕೆ.ಜಿ. / ಎಕರೆ ಪ್ರತಿ ಸುಳಿಯಲ್ಲಿ 2–3 ಹರಳುಗಳನ್ನು ಬಳಸಬೇಕು.

**ಭತ್ತ:** ಮಣ್ಣಿನ ಪರೀಕ್ಷೆಯ ಆಧಾರದ ಮೇಲೆ ಶಿಫಾರಸ್ಸು ಮಾಡಿದ ರಾಸಾಯನಿಕ ಗೊಬ್ಬರ ಬಳಸಿ (40:20:20: ಕಿಲೋ/ ಎಕರೆ). ಸಸಿಮಡಿಯಲ್ಲಿ ಸಸಿಗಳ ಒಂದು ಅಂಗುಲ (2–3 ಸೆಂ.ಮೀ.) ಎತ್ತರ ಬೆಳೆದಾಗ ತೆಳ್ಳಗೆ ನೀರು ಹಾಯಿಸಿ, ಸಸಿ ನಾಟಿ ಮಾಡುವ 6 ದಿನಗಳಿಗೆ ಮುಂಚೆ ಒಂದು ಗುಂಟೆಗೆ 1.3 ಕೆ.ಜಿ. ಯೂರಿಯಾ ರಾಸಾಯನಿಕ ಗೊಬ್ಬರಗಳನ್ನು ಮೇಲು ಗೊಬ್ಬರವಾಗಿ ಕೊಡಿ. • ಸಸಿಮಡಿಯಲ್ಲಿ ಹಳದಿ ಕಾಂಡಕೊರಕ ಚಿಟ್ಟೆ ನಿರ್ವಹಿಸಲು ಸಸಿಮಡಿಗೆ ಮೋಹಕ ಬಲೆ (2/ ಸಸಿಮಡಿ) ಅಳವಡಿಸಿ ನಿಯಂತ್ರಿಸಬೇಕು.

**ಜೈವಿಕ ಗೊಬ್ಬರಗಳು:** ಅಜೊಸ್ಪೈರಿಲಂ ಬಳಕೆ: ಇದು ಏಕಾಣು ಸೂಕ್ಷ್ಮ ಜೀವಿಯಾಗಿದ್ದು ಭತ್ತ ಸಸ್ಯದ ಬೇರಿನ ಹೊರವಲಯದಲ್ಲಿ ಜೀವಿಸಿ, ವಾತಾವರಣದಲ್ಲಿರುವ ಸಾರಜನಕವನ್ನು ಸ್ಥಿರೀಕರಣ ಮಾಡುತ್ತದೆ.

**ಬಳಸುವ ವಿಧಾನಗಳು: 1. ಬೀಜೋಪಚಾರ:** 50 ಗ್ರಾಂ ಬೆಲ್ಲ ಅಥವಾ ಸಕ್ಕರೆಯನ್ನು ಅರ್ಧ ಲೀಟರ್ ನೀರಿನಲ್ಲಿ ಕರಗಿಸಿ 5 ನಿಮಿಷಗಳ ಕಾಲ ಕುದಿಸಿ ಅಂಟು ದ್ರಾವಣವನ್ನು ತಯಾರಿಸಬೇಕು. ತಂಪಾದ ಬೆಲ್ಲ ಅಥವಾ ಸಕ್ಕರೆ ದ್ರಾವಣವನ್ನು ಭತ್ತದ ಮೇಲೆ ಸಮಾನವಾಗಿ ಲೇಪಿಸಿ ನಂತರ ಅಜೋಸ್ಪೈರಿಲಂ ಗೊಬ್ಬರವನ್ನು ( 400 ಗ್ರಾಂ.) ಎಕರೆಗೆ ಬೇಕಾಗುವಷ್ಟು ಮಿಶ್ರಣ ಮಾಡಬೇಕು. ನಂತರ ಅರ್ಧ ಗಂಟೆ ನೆರಳಿನಲ್ಲಿ ಒಣಗಿಸಿ ಬಿತ್ತಲು ಉಪಯೋಗಿಸಬೇಕು.

**2. ನಾಟಿ ಮಾಡುವ ಪ್ರದೇಶದಲ್ಲಿ ಉಪಯೋಗಿಸುವುದು:** 800 ಗ್ರಾಂ. ಅಜೋಸ್ಪೈರಿಲಂ ಜೈವಿಕ ಗೊಬ್ಬರವನ್ನು ನುಣ್ಣನೆ ಪುಡಿಯಾದ 10 ಕೆ.ಜಿ. ಕೊಟ್ಟಿಗೆ ಗೊಬ್ಬರ ಮತ್ತು 10 ಕೆ.ಜಿ. ಮಣ್ಣಿನೊಡನೆ ಮಿಶ್ರಣಗೊಳಿಸಿ, ಸಸಿ ಕ್ಷೇತ್ರಕ್ಕೆ ಅಥವಾ ಒಂದು ಎಕರೆ ನಾಟಿ ಮಾಡುವ ಪ್ರದೇಶಕ್ಕೆ ನೇರವಾಗಿ ಎರಚಿ ಉಳುಮೆ ಮಾಡಬೇಕು.

**3. ಸಸಿ ಕಂದುಗಳ ಉಪಚಾರ:** 400 ಗ್ರಾಂ ಅಜೋಸ್ಪೈರಿಲಂ ಗೊಬ್ಬರವನ್ನು ಬ್ಯಾರೆಲ್ (200 ಲೀ ಪ್ರಮಾಣ) ದಲ್ಲಿ ನೀರು ತುಂಬಿ ಮಿಶ್ರ ಮಾಡಿ ಸಸಿಮಡಿಯಿಂದ ಕಿತ್ತ ಸಸಿಗಳನ್ನು 10 ರಿಂದ 15 ನಿಮಿಷಗಳ ಕಾಲ ಅದ್ದಿ ನಂತರ ನಾಟಿ ಮಾಡಬೇಕು. ಮೇಲೆ ಹೇಳಿದ ಸಾವಯವ ಗೊಬ್ಬರಗಳ ಬಳಕೆಯಿಂದ ಮಣ್ಣಿನ ಭೌತಿಕ ಹಾಗೂ ಜೈವಿಕ ಗುಣಗಳು ಉತ್ತಮಗೊಳ್ಳುತ್ತವೆ. ಬೆಳೆಗೆ ಬೇಕಾಗುವ ಸಾರಜನಕ, ರಂಜಕ ಮತ್ತು ಪೊಟ್ಯಾಷಿಯಂಗಳನ್ನು ಭಾಗಶ: ಪೂರೈಸಲು, ಸಾವಯವ ಗೊಬ್ಬರಗಳಿಂದ ಸಾಧ್ಯವಾಗದಂತಹ ಸಂದರ್ಭದಲ್ಲಿ, ಪೂರಕ ರಾಸಾಯನಿಕ ಗೊಬ್ಬರಗಳನ್ನು ಉಪಯೋಗಿಸಬೇಕು. ರಾಸಾಯನಿಕ ಗೊಬ್ಬರಗಳು, ಸಾವಯವ ಗೊಬ್ಬರಗಳಿಗೆ ಪೂರಕಗಳೇ ಹೊರತು, ಪರ್ಯಾಯ ಗೊಬ್ಬರಗಳಲ್ಲ ಎಂಬುದನ್ನು ಗಮನಿಸಬೇಕು ಸಾವಯವ ಮತ್ತು ರಾಸಾಯನಿಕ ಗೊಬ್ಬರಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿದರೆ, ಮಣ್ಣಿನ ಉತ್ಪಾದಕತೆಯನ್ನು ಉನ್ನತ ಮಟ್ಟದಲ್ಲಿ ಕಾಯ್ದುಕೊಂಡು ಭತ್ತದ ಅಧಿಕ ಇಳುವರಿಯನ್ನು ಕಡಿಮೆ ಖರ್ಚಿನಲ್ಲಿ ನಿರಂತರವಾಗಿ ಪಡೆಯಬಹುದಾಗಿದೆ.

**ಹತ್ತಿ:** ಬಿತ್ತನೆಯಾದ 60,90 ಮತ್ತು 110 ದಿನಗಳ ನಂತರ ಶೇ. 2 ರ ಡಿ.ಎ.ಪಿ ಮತ್ತು ಮೆಗ್ನೀಷಿಯಂ ಸಲ್ಫೇಟ್ ದ್ರಾವಣವನ್ನು ಎಲೆಗಳ ಮೇಲೆ ಸಿಂಪರಣೆ ಮಾಡುವದರಿಂದ ಎಲೆ ಕೆಂಪಾಗುವಿಕೆ ತಡೆದು ಕಾಯಿಯ ಗಾತ್ರ ಹೆಚ್ಚಿಸಬಹುದು. ಪೊಟ್ಯಾಷಿಯಂ ನೈಟ್ರೇಟ್ ($KNO3$) ಶೇ. 2 % ರಷ್ಟುನ್ನು ಬಿತ್ತನೆಯಾದ 75, 90 ಮತ್ತು 110 ದಿನಗಳಲ್ಲಿ ಸಿಂಪರಣೆ ಮಾಡಿದರೆ ಕಾಯಿಗಳ ಗಾತ್ರ ಮತ್ತು ಇಳುವರಿಯನ್ನು ಹೆಚ್ಚಿಸಬಹುದು.

**ರಸ ಹೀರುವ ಕೀಟಗಳು:** ಥ್ರಿಪ್ಸ್ ಹೇನು, ಹಸಿರು ಜಿಗಿಹುಳು, ಮಿರಿಡ್ ತಿಗಣೆ, ಬಿಳಿನೊಣ, ಮೈಟ್ ನುಸಿ

**ಲಕ್ಷಣಗಳು:** ಬೆಳೆಯುತ್ತಿರುವ ಕುಡಿ, ಎಲೆಗಳ ಕೆಳಭಾಗ ಮತ್ತು ಮೊಗ್ಗುಗಳಿಂದ ರಸ ಹೀರುತ್ತವೆ. ಬೆಳವಣಿಗೆ ಕುಂಠಿತವಾಗಿ ಎಲೆಗಳು ಮುದುಡಿಕೊಳ್ಳುತ್ತವೆ. ಗಿಡಗಳು ಸುಟ್ಟಂತೆ ಕಂಡು ಇಳುವರಿ ಕಡಿಮೆಯಾಗುತ್ತದೆ. ಮೊಗ್ಗು ಮತ್ತು ಸಣ್ಣ ಕಾಯಿಗಳ ಬೆಳವಣಿಗೆ ಕುಂಠಿತವಾಗುತ್ತದೆ. ಹತ್ತಿಯ ಗುಣಮಟ್ಟ ಕಡಿಮೆಯಾಗುತ್ತದೆ.

**ಹತೋಟಿ:** **ಥ್ರಿಪ್ಸ್ ಮತ್ತು ಹಸಿರು ಜಿಗಿ** ಅಸಿಟಾಮಿಪ್ರಿಡ್ 20 sp 0.15 ಗ್ರಾಂ. / ಲೀ. ಹೇನು ಬೇವು ಆಧಾರಿತ ಕೀಟನಾಶಕ 3 ಮಿಲೀ. /ಲೀ. **ಹಿಟ್ಟು ತಿಗಣೆ ಮತ್ತು ಮಿರಿಡ್ ತಿಗಣೆ** ಅಸಿಫೇಟ್ 75 sp1 ಗ್ರಾಂ/ ಲೀ ಅಥವಾ ಪ್ರೊಫೆನೊಫಾಸ್ 50 ಇ.ಸಿ. 2 ಮಿಲೀ/ ಲೀ. **ಬಿಳಿನೊಣ** ಟ್ರೈಜೋಫಾಸ್ 1.5 ಮಿಲೀ / ಲೀ. **ಮೈಟ್ ನುಸಿ:** ಪ್ರೋಪರ್ ಗೈಟ್ 2 ಮಿಲೀ / ಲೀ.

**ಶೇಂಗಾ:** ಬಿತ್ತಿದ 25 ರಿಂದ 40 ದಿನಗಳ ನಂತರ ಪ್ರತಿ ಎಕರೆಗೆ 200 ಕೆ.ಜಿ. ಉತ್ತಮ ಗುಣಮಟ್ಟದ ಜಿಪ್ಸಂನ್ನು ಬಳಸಿದರೆ ಇಳುವರಿಯನ್ನು ಹೆಚ್ಚಿಸಬಹುದು.ಕಳೆನಾಶಕ: 4 ಮಿಲೀ ಲ್ಯಾಸ್ಸೊ (ಅಲ್ಲಾಕ್ಲೋರ್ 50 ಇ.ಸಿ.) ಕಳೆನಾಶಕವನ್ನು ಬೆರಸಿ ಬಿತ್ತನೆ ದಿನ ಅಥವಾ ಮರುದಿನ ಮಣ್ಣಿಗೆ ಸಿಂಪರಣೆ ಮಾಡಬೇಕು ಪ್ರತಿ ಎಕರೆಗೆ 300 ರಿಂದ 400 ಲೀ. ಸಿಂಪರಣಾ ದ್ರಾವಣ ಅವಶ್ಯ. ಸಿಂಪರಣೆ ಸಮಯದಲ್ಲಿ ಮಣ್ಣಿನಲ್ಲಿ ಸಾಕಷ್ಟು ತೇವಾಂಶವಿರಬೇಕು ಹಾಗೂ ಸಿಂಪರಣೆ ಮಾಡಿದ ಭೂಮಿಯನ್ನು ತುಳಿಯಬಾರದು.

**ಅಡಿಕೆ:** ಮಳೆಗಾಲ ಪ್ರಾರಂಭವಾಗುತ್ತಿರುವುದರಿಂದ ತೋಟದ ಬದಿಯಿರುವ ಕಾಲುವೆಗಳನ್ನು ಸ್ವಚ್ಚಗೊಳಿಸಿ ನೀರು ಸರಾಗವಾಗಿ ಹರಿದುಹೋಗಲು ಅನುವು ಮಾಡಿ ಕೊಡಬೇಕು. ಇಲ್ಲದಾದರೆ ಹೆಚ್ಚು ನೀರು ಹೊಲಕ್ಕೆ ನುಗ್ಗಿ ತೋಟಕ್ಕೆ ಶೀತವಾಗಿ ಬೇರುಗಳ ಉಸಿರಾಟಕ್ಕೆ ತೊಂದರೆಯಾಗುತ್ತದೆ. ಬಸಿಗಾಲುವೆಗಳಿದ್ದರೆ ಅವುಗಳನ್ನು ಸ್ವಚ್ಚಗೊಳಿಸಬೇಕು. ಇಲ್ಲವಾದರೆ ಪ್ರತಿ 3 ಸಾಲಿಗೊಂದು 2 ಮೀಟರ್ ಆಳದ ಬಸಿಗಾಲುವೆಗಳನ್ನು ತೆರೆಯಬೇಕು.

**ಹೈನುಗಾರಿಕೆ:** ಬಹುವಾರ್ಷಿಕ ಏಕದಳ ದಾನ್ಯದ ಮೇವುಗಳಾದ ಸಂಪೂರ್ಣ (ಡಿಹೆಚ್ಎನ್–6), ಕೋ–3 ಹಾಗೂ ಗಿನಿ ಹುಲ್ಲುಗಳನ್ನು ನಾಟಿಮಾಡಲು ಇದು ಸೂಕ್ತ ಸಮಯವಾಗಿರುತ್ತದೆ. ಜಾನುವಾರುಗಳಿಗೆ ಕಾಲು–ಬಾಯಿ ಹಾಗೂ ಗಂಟಲು ಬೇನೆ ರೋಗಗಳಿಗೆ ಲಸಿಕೆ ಹಾಕಿಸಲು ಇದು ಸೂಕ್ತ ಸಮಯವಾಗಿರುತ್ತದೆ.ರೈತಬಾಂಧವರು ತಮ್ಮ ಕುರಿ / ಮೇಕೆಗಳಿಗೆ ಪಿ.ಪಿ.ಆರ್ ಖಾಯಿಲೆಯ ವಿರುದ್ದ ಲಸಿಕೆಯನ್ನು ತಪ್ಪದೆ ಹಾಕಿಸಿಕೊಳ್ಳಬೇಕು. ಲಸಿಕೆಯು ಪಶುಪಾಲನಾ ಇಲಾಖೆಯಲ್ಲಿ ಉಚಿತವಾಗಿ ಲಭ್ಯವಿರುತ್ತದೆ.

**ಮೀನು ಕೃಷಿ:** ಮಳೆಗಾಲದಲ್ಲಿ ಮೀನು ಮರಿಗಳ ಉತ್ಪಾದನೆ ನಡೆಯುತ್ತಿದೆ. ಈ ಸಂದರ್ಭದಲ್ಲಿ ಕೃಷಿ ಹೊಂಡಗಳು, ಕೆರೆಗಳು, ಕೊಳಗಳು, ಬಾವಿಗಳು, ಚೆಕ್ ಡ್ಯಾಂಗಳು ಮುಂತಾದವುಗಳಲ್ಲಿ ಮೀನು ಕೃಷಿ ಕೈಗೊಳ್ಳಲು ಸಕಾಲ. ಬೆರಳುದ್ದು ಗಾತ್ರದ ಮೀನುಮರಿಗಳನ್ನು ಚದರ ಮೀಟರಿಗೆ 1–2 ರಂತೆ ದಾಸ್ತಾನು ಮಾಡುವುದು ಸೂಕ್ತ. ದನದ ಸಗಣಿಯಿಂದ ಫಲವತ್ತತೆ ನೀರಿಗೆ ಆರೋಗ್ಯವಂತ ಮೀನು ಮರಿಗಳನ್ನು ಬಿಟ್ಟರೆ, 8 ರಿಂದ 10 ತಿಂಗಳಲ್ಲಿ ಮಾರುಕಟ್ಟೆಗೆ ಕೊಡುವ ಗಾತ್ರಕ್ಕೆ ಬೆಳೆಯುತ್ತವೆ. ರೈತರು ಮೀನುಕೃಷಿಯನ್ನು ಸಮಗ್ರವಾಗಿ ಅಳವಡಿಸಿಕೊಂಡರೆ, ಹೆಚ್ಚವರಿ ಆದಾಯ ಖಂಡಿತವಾಗಿ ದೊರೆಯುತ್ತದೆ.• ಬಲಿತ ಗೆಂಡೆಮರಿಗಳನ್ನು ಉತ್ಪಾದಿಸುವ (ಬರೀ 3 ತಿಂಗಳಲ್ಲಿ) ತಂತ್ರಜ್ಞಾನವಿದೆ. ಇದರಿಂದ, ಬೇರೆ ರೈತರುಗಳಿಗೆ ಒಳ್ಳೆಯ, ದೊಡ್ಡಗಾತ್ರದ ಮೀನುಮರಿಗಳನ್ನು ಸ್ಥಳೀಯವಾಗಿ ಒದಗಿಸಿದಂತಾಗುತ್ತದೆ.

ಸಂಪಾದಕರು: ಡಾ. ದೇವರಾಜ ಟಿ.ಎನ್.

ಸಹ ಸಂಪಾದಕರು: ಶ್ರೀ ರಘುರಾಜ ಜೆ., ಶ್ರೀ ಬಸವನಗೌಡ ಎಂ.ಜಿ., ಶ್ರೀ ಮಲ್ಲಿಕಾರ್ಜುನ ಬಿ.ಓ., ಡಾ. ಜಯದೇವಪ್ಪ ಜಿ.ಕೆ., ಶ್ರೀ ಪ್ರಸನ್ನಕುಮಾರ ಎನ್., ಡಾ. ಪ್ರದೀಪ್ ಹೆಚ್.ಎಂ.

ಪ್ರಕಾಶಕರು: ತರಳಬಾಳು ಕೃಷಿ ವಿಜ್ಞಾನ ಕೇಂದ್ರ, ಕದಳೀವನ, ಎಲ್.ಐ.ಸಿ. ಕಾಲೋನಿ ಲೇಔಟ್, ಬಿಐಇಟಿ ರಸ್ತೆ, ದಾವಣಗೆರೆ–577004, ಕರ್ನಾಟಕ

ಮುದ್ರಕರು : ಅಶ್ವಿನಿ ಪ್ರಿಂಟರ್ಸ್, ದಾವಣಗೆರೆ. ಫೋ : 2533341.